# 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

## ಎಸ್. ಸಿ. ಸಂಃ276/2023

ಫಿರ್ಯಾದಿ : ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ನಿರೀಕ್ಷಕರು,
ಮಂಡಿ ಪೊಲೀಸ್ ಠಾಣೆ,
ಮೈಸೂರು ಸಿಟಿ .

**ವಿರುದ್ಧ**

ಆರೋಪಿತರು : ಶ್ರೀ ಈರಣ್ಣ ಮತ್ತು ಮತ್ತೊಬ್ಬರು

## ದೋಷಾರೋಪಣೆ

ನಾನು ಶ್ರೀ ಮಲ್ಲನಗೌಡ, 4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು, ಈ

ಕೆಳಕಂಡ ಆರೋಪಿಯಾದ :-

1. ಶ್ರೀ ಈರಣ್ಣ ಉಃ ಈರಣ್ಣ
ಬಿನ್ ರಾಜು,
ಸುಮಾರು 41 ವರ್ಷ,
ವಾಸ ನಂ.ಬಿ -5 ಟಿ -4,
ನೇ ಮೈನ್ , ಮೆದರ ಬ್ಲಾಕ್ ,
ಬ್ಯಾಂಬೂ ಬಜಾರ್, ಮೈಸೂರು
2. ಶ್ರೀ ದಿನೇಶ ಇ ಉಃ ದಿನೇಶ
ಬಿನ್ ಈರಣ್ಣ
ಸುಮಾರು 19 ವರ್ಷ,
ವಾಸ ನಂ.ಬಿ -2 ಟಿ -4,

1 ನೇ ಮೈನ್ , ಮೆದರ ಬ್ಲಾಕ್ ,
ಬ್ಯಾಂಬೂ ಬಜಾರ್, ಮೈಸೂರು

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ

ದಿನಾಂಕ 15.04.2023 ರಂದು ರಾತ್ರಿ 8.30 ಗಂಟೆಯಲ್ಲಿ ಮೈಸೂರು ನಗರ ಮಂಡಿ ಪೊಲೀಸ್ ಠಾಣಾ ಸರಹದ್ದು ಬಂಬೂ ಬಜಾರ್ 2 ನೇ ಮುಖ್ಯ ರಸ್ತೆಯಲ್ಲಿ ದೊಡ್ಡ ಮೋರಿಯ ಸ್ಲ್ಯಾಬ್ ಬಳಿ ಸಾಕ್ಷಿ 1 ರಿಂದ 5 ರವರುಗಳು ಮಾತನಾಡುತ್ತ ನಿಂತಿದ್ದಾಗ, ಇದೇ ವೇಳೆಗೆ 2 ನೇ ಆರೋಪಿಯಾದ ನೀವು ನಿಮ್ಮ ಸಹೋದರ ಕಾನೂನು ಸಂಘರ್ಷಕ್ಕೊಳಪಟ್ಟಿರುವ ಬಾಲಕ ಗೌತಮ್ ನೊಂದಿಗೆ ಸಮಾನ ಉದ್ದೇಶದಿಂದ ಬಂದು, ಸಾಕ್ಷಿ 6 ರವರ ಜೊತೆಗೆ ಜಗಳ ನಡೆಯುತ್ತಿದ್ದ ವಿಚಾರದಲ್ಲಿ, ಸಾಕ್ಷಿ 02 ರವರು ಮಧ್ಯ ಪ್ರವೇಶಿಸಿ ಜಗಳ ಬಿಡಿಸಿದ ವಿಚಾರದಲ್ಲಿ, ಸಾಕ್ಷಿ 02 ರವರನ್ನು "ನೀನು ಯಾರೂ ನಮ್ಮನ್ನು ಕೇಳಲು ಬೋಳಿಮಗನೆ ನಿನ್ನದೆಷ್ಟಿದೆ ನೋಡಿಕೊಂಡು ನಿಮ್ಮವ್ವನ್" ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. 504 ರ ಸಹವಾಚಕ 34 ಐಪಿಸಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ,ಸ್ಥಳ ಹಾಗೂ ಸಮಯದಲ್ಲಿ 2 ನೇ ಆರೋಪಿಯಾದ ನೀವು ಮತ್ತು ಕಾನೂನು ಸಂಘರ್ಷಕ್ಕೊಳಪಟ್ಟಿರುವ ಬಾಲಕ ಇಬ್ಬರೂ ಸಾಕ್ಷಿ-2 ರವರನ್ನು ಹೊಡೆಯಲು ಪ್ರಾರಂಭಿಸಿದಾಗ, ಸಾಕ್ಷಿ-2 ರವರು ಸಹ -2 ನೇ ಆರೋಪಿಗೆ ಕೈಗಳಿಂದ ಮೈಕೈಗೆ ಹೊಡೆಯುತ್ತಿದ್ದ ವೇಳೆಗೆ 1 ನೇ ಆರೋಪಿಯು ಎಡಗೈಯಲ್ಲಿ ಚಾಕುವನ್ನು ಹಿಡಿದುಕೊಂಡು ಬಂದು ಸಾಕ್ಷಿ 2 ರವರಿಗೆ "ನನ್ನ ಮಕ್ಕಳಿಗೆ ಹೊಡೆಯುವಷ್ಟು ಕೊಬ್ಬು ನಿನಗೆ ಸೂಳೆ ಮಗನೆ ನಿಮ್ಮವ್ವನ್" ಎಂದು ಅವಾಚ್ಯ ಶಬ್ದಗಳಿಂದ ಬೈದು ಈ ದಿನ ನಿನ್ನನ್ನೂ ಮುಗಿಸುತ್ತೇನೆಂದು ಕೊಲ್ಲುವ ಉದ್ದೇಶದಿಂದ ಚಾಕುವಿನಿಂದ ಕತ್ತಿನ ಭಾಗಕ್ಕೆ ಹೊಡೆಯಲು ಪ್ರಯತ್ನಿಸಿದಾಗ, ಸಾಕ್ಷಿ - 02 ರವರು ಕತ್ತಿಗೆ ಬೀಳುತ್ತಿದ್ದ ಏಟನ್ನು ತಪ್ಪಿಸಿಕೊಂಡಿದ್ದರಿಂದ ಬಲಭಾಗದ ಮುಖಕ್ಕೆ ಚಾಕುವಿನ

ಏಟು ಬಿದ್ದು ಮಾರಣಾಂತಿಕವಾದ ತೀವ್ರ ಸ್ವರೂಪದ ರಕ್ತ ಗಾಯವಾಗಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. 307 ರ ಸಹವಾಚಕ 34 ಐಪಿಸಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, 2 ನೇ ಆರೋಪಿಯಾದ ನೀವುಸ 1 ನೇ ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಕಿತ್ತುಕೊಂಡು ಸಾಕ್ಷಿ-2 ರವರನ್ನು ಕೊಲ್ಲುವ ಉದ್ದೇಶದಿಂದ ಎಡಭಾಗದ ಹೊಟ್ಟೆಯ ಬಳಿಗೆ ಚುಚ್ಚಲು ಪ್ರಯತ್ನಿಸಿದ್ದು, ಸಾಕ್ಷಿಯ ರವರು ಎಡಗೈಯನ್ನು ಅಡ್ಡ ತಂದಿದ್ದರಿಂದ ಎಡಗೈಗೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ರಕ್ತಗಾಯವಾಗಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. 323 ರ ಸಹವಾಚಕ 34 ಐಪಿಸಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಆರೋಪಿತರಾದ ನೀವುಗಳು ಸಾಕ್ಷಿ-2 ರವರನ್ನು ಕುರಿತು " ಇವತ್ತು ಬದುಕಿದ್ದಿಯಾ ನಿನ್ನನ್ನು ಕೊಲ್ಲುತ್ತೇವೆ " ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಕಾರಣದಿಂದ ಆರೋಪಿತರಾದ ನೀವು ಭಾ.ದಂ.ಸಂ. 306 ರ ಸಹವಾಚಕ 34 ಐಪಿಸಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಮೇಲ್ಕಂಡ ಆರೋಪದಡಿ ಆರೋಪಿತರಾದ ನೀವು ನನ್ನಿಂದ ಈ ದಿನ ದಿನಾಂಕ 05.07.2024 ರಂದು ಅಧಿವಿಚಾರಣೆಗೆ ಒಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ276/2023

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ನಿರೀಕ್ಷಕರು,
ಮಂಡಿ ಪೊಲೀಸ್ ಠಾಣೆ,
ಮೈಸೂರು ಸಿಟಿ .

**ವಿರುದ್ಧ**

**ಆರೋಪಿ** ಶ್ರೀಈರಣ್ಣ ಮತ್ತು ಮತ್ತೊಬ್ಬರು

ಆರೋಪಿ ಃ 1 ಃ **ಈರಣ್ಣ ಉಃ ಈರಣ್ಣ**

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ **05.07.2024** ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
ಮೈಸೂರು.

4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಎಸ್. ಸಿ. ಸಂಃ276/2023

**ಫಿರ್ಯಾದಿ :** ಕರ್ನಾಟಕ ರಾಜ್ಯ ಸರ್ಕಾರ
ಆರಕ್ಷಕ ನಿರೀಕ್ಷಕರು,
ಮಂಡಿ ಪೊಲೀಸ್ ಠಾಣೆ,
ಮೈಸೂರು ಸಿಟಿ .

**ವಿರುದ್ಧ**

**ಆರೋಪಿ** ಶ್ರೀಈರಣ್ಣ ಮತ್ತು ಮತ್ತೊಬ್ಬರು

ಆರೋಪಿ ಃ 2 ಃ ಶ್ರೀ ದಿನೇಶ ಇ. ಉಃ ದಿನೇಶ

**ಆರೋಪಿಯ ಹೇಳಿಕೆ**

ಪ್ರಶ್ನೆ – 1) ಈಗ ನಿಮಗೆ ಓದಿ ತಿಳಿಸಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೇ ?

ಉತ್ತರ –

ಪ್ರಶ್ನೆ –2) ಸದರಿ ದೋಷಾರೋಪಣೆಗೆ ಸಂಬಂಧಿಸಿದಂತೆ ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ನಡೆಯಬೇಕೆಂದು ಬಯಸುತ್ತೀರೋ ?

ಉತ್ತರ –

(ಮೇಲಿನ ದೋಷಾರೋಪಣೆಯನ್ನು ಆರೋಪಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಓದಿ ತಿಳಿಸಿ ಹೇಳಿದ ನಂತರ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನನ್ನ ಸ್ವಹಸ್ತಾಕ್ಷರದಲ್ಲಿ ಬರೆದುಕೊಳ್ಳಲಾಯಿತು ಎಂದು ನಾನು ಈ ದಿನ ಅಂದರೆ, ದಿನಾಂಕ 05.07.2024 ರಂದು ದೃಢೀಕರಿಸುತ್ತೇನೆ )

( ಮಲ್ಲನಗೌಡ )
4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.